# ಸಂತ ಜ್ಞಾನದೇವರು

ಸಿ. ಎನ್. ದೇಶಪಾಂಡೆ

**ಸಂ**ತ ಜ್ಞಾನದೇವರು ಬಾಳಿದ ಕೇವಲ ಇಪ್ಪತ್ತೆರಡು ವರ್ಷಗಳ ಜೀವನ ಅತ್ಯಂತ ಅಲೌಕಿಕ ಹಾಗೂ ಅಷ್ಟೇ ರೋಚಕ. ಸಂತ ನಾಮದೇವರು ಅವರ ಸಮಕಾಲೀನರು ಮತ್ತು ನಿಕಟ ಒಡನಾಡಿಗಳು. ಅವರು ತಮ್ಮ ಅಭಂಗಗಳಲ್ಲಿ ಜ್ಞಾನೇಶ್ವರರ ಚರಿತ್ರೆಯನ್ನು ಹೆಣೆದಿದ್ದಾರೆ. ಅದು ಪ್ರಶ್ನಾತೀತ ಮತ್ತು ಏಕಮೇವ ಆಕರ. ಶ್ರೀಜ್ಞಾನದೇವರು ಮಹಾರಾಷ್ಟ್ರದ ಆಳಂದಿ (ಆಗ ಅಲಂಕಾಪುರೀ) ಗ್ರಾಮದಲ್ಲಿ ಕ್ರಿ. ಶ. ೧೨೮೧ ರಲ್ಲಿ ಜನಿಸಿ, ಕ್ರಿ. ಶ. ೧೩೦೯ ರಲ್ಲಿ, ಅದೇ ಗ್ರಾಮದಲ್ಲಿಯ ಸಿದ್ಧೇಶ್ವರ ಮಂದಿರದ ಎದುರು ಒಂದು ಗುಹೆಯಲ್ಲಿ ಸಂಜೀವನೀ ಸಮಾಧಿಯನ್ನು ಸ್ವೀಕರಿಸಿದರು. ಅವರ ತಂದೆ ವಿಠ್ಠಲಪಂತರು; ಗೃಹಸ್ಥಾಶ್ರಮದಿಂದ ಸಂನ್ಯಾಸವನ್ನು ಸ್ವೀಕರಿಸಿದವರು; ನಂತರ ಮತ್ತೆ ತಮ್ಮ ಗುರುಗಳ ಅಣತಿಯಂತೆ ಗೃಹಸ್ಥಾಶ್ರಮಕ್ಕೆ ಮರಳಿದವರು. ಆದ್ದರಿಂದ ಆಳಂದಿಯ ಬ್ರಾಹ್ಮಣವೃಂದದಿಂದ ಬಹಿಷ್ಕೃತರಾಗಿ, ಅಲ್ಲಿದ್ದ ಇಂದ್ರಾಯಣೀ ನದಿಯ ಆಚೆಗಿನ ದಂಡೆಯ ಮೇಲೆ ಒಂದು ಗುಡಿಸಲಿನಲ್ಲಿ ತಂಗಿದ್ದರು. ಆಗ ಅವರಿಗೆ ನಿವೃತ್ತಿ, ಜ್ಞಾನದೇವ, ಸೋಪಾನ ಮತ್ತು ಮುಕ್ತಾ ಎಂಬ ನಾಲ್ಕು ಮಕ್ಕಳು ಹುಟ್ಟಿದರು. ಕಾಲಕ್ರಮದಂತೆ ಜ್ಯೇಷ್ಠಪುತ್ರನಾದ ನಿವೃತ್ತಿಯ ಉಪನಯನದ ಕಾಲ ಒದಗಿಬಂದಿತು. ಅದಕ್ಕೆ ವಿಠ್ಠಲಪಂತರು ಅಲ್ಲಿಯ ಬ್ರಾಹ್ಮಣರ ಅನುಮತಿಯನ್ನು ಕೋರಿದರು. ಅದನ್ನು ತಿರಸ್ಕರಿಸಿ, ಆ ಬ್ರಾಹ್ಮಣರು, "ಸಂನ್ಯಾಸದಿಂದ ಸಂಸಾರಕ್ಕೆ ಬಂದ ಪಾಪಕ್ಕೆ ಮರಣವೇ ಪ್ರಾಯಶ್ಚಿತ್ತ" ಎಂದು ತೀರ್ಮಾನಿಸಿದರು. ಅದರಂತೆ ಜ್ಞಾನದೇವನ ತಂದೆತಾಯಿಯರು ಗೋದಾವರಿ ನದಿಯಲ್ಲಿ ಜಲಸಮಾಧಿಯನ್ನು ಪಡೆದರು. ಆಗ ೯ ವರ್ಷದ ನಿವೃತ್ತಿ, ೭ ವರ್ಷದ ಜ್ಞಾನದೇವ, ೫ ವರ್ಷದ ಸೋಪಾನ ಮತ್ತು ೩ ವರ್ಷದ ಮುಕ್ತಾ – ಇವರೆಲ್ಲರೂ ತಬ್ಬಲಿಗಳಾದರು.



ತಂದೆತಾಯಿಯರ ಅನಿರೀಕ್ಷಿತ ಅಗಲುವಿಕೆಯಿಂದ ಆ ಮಕ್ಕಳು ಧೃತಿಗೆಡಲಿಲ್ಲ. ಅವರೆಲ್ಲರೂ ಜ್ಞಾನವೈರಾಗ್ಯಗಳಿಂದ ಮಾಗಿದ್ದರು. ಹಿರಿಯರಾದ ನಿವೃತ್ತಿನಾಥರು ಆಳಂದಿಯ ಬ್ರಾಹ್ಮಣರನ್ನು ಕುರಿತು, "ಇನ್ನು ನಮ್ಮ ಗತಿ ಏನು?" ಎಂದು ಕೇಳಿದರು. ಆಗ ಅವರು, "ಸಂನ್ಯಾಸಿಯ ಮಕ್ಕಳಿಗೆ ಶಾಸ್ತ್ರದಲ್ಲಿ ಯಾವ ಸಂಸ್ಕಾರಗಳೂ ಇಲ್ಲ. ಆದರೆ ನಮಗಿಂತ ಹೆಚ್ಚಿನ ಶಾಸ್ತ್ರವೇತ್ತರು ಪೈಠಣ ನಗರದಲ್ಲಿ ಇದ್ದಾರೆ. ಅವರಿಂದ ನೀವೆಲ್ಲರೂ ಶುದ್ಧಿಪತ್ರವನ್ನು ತಂದರೆ, ನಮ್ಮ ಅಭ್ಯಂತರವಿಲ್ಲ" ಎಂದು ಹೇಳಿ, ಅವರಿಗೆ ಒಂದು ಪರಿಚಯಪತ್ರವನ್ನು ಕೊಟ್ಟು ಕಳಿಸಿದರು. ಪರಮಾನುಭವವನ್ನು ಪಡೆದ ನಿವೃತ್ತಿನಾಥರಿಗೆ ಪೈಠಣಕ್ಕೆ ಹೋಗುವುದು; ಅಲ್ಲಿಯ ಬ್ರಾಹ್ಮಣರಿಗೆ ವಿನಂತಿಸುವುದು, ಅವರು ಕೂಡ ಶಾಸ್ತ್ರದಲ್ಲಿ ಯಾವ ಉಪಾಯವಿಲ್ಲವೆಂದು ಹೇಳುವುದು – ಇದೇನೂ ಬೇಕಾಗಿರಲಿಲ್ಲ. ಆತ್ಮಸ್ವರೂಪರೇ ಆದ ತಾವು ಮತ್ತೆ ವರ್ಣಾಶ್ರಮಗಳ ಉಪಾಧಿಗಳಿಗೆ ಬಲಿಬಿದ್ದು ಕರ್ಮಕಿಂಕರರಾಗುವುದು ಅವರಿಗೆ ಸರಿ ಎನ್ನಿಸಲಿಲ್ಲ. ಈ ವಿಚಾರವನ್ನು ಜ್ಞಾನದೇವರಿಗೆ ಅವರು ಹೇಳಿದರು. ಉಳಿದವರೂ ಇದನ್ನೇ ಅನುಮೋದಿಸಿದರು. ಆದರೆ ಜ್ಞಾನದೇವರು ಇದಕ್ಕೆ ವಿರೋಧವನ್ನು ವ್ಯಕ್ತಪಡಿಸಿದರು. "ನಮಗೆ ನಿಜವಾಗಿಯೂ ಉಪಾಧಿಗಳು ಬೇಡ. ಆದರೆ ವೇದಗಳಲ್ಲಿ ಭಗವಂತನೇ ಶಾಸ್ತ್ರವಿರುದ್ಧವಾಗಿ ಆಚರಿಸಕೂಡದು, **ತಸ್ಮಾತ್ ಶಾಸ್ತ್ರಂ ಪ್ರಮಾಣಂ ತೇ** – 'ಶಾಸ್ತ್ರವೇ ನಿನಗೆ ಪ್ರಮಾಣ' ಎಂದು ಹೇಳಿರುವನು. ಆದ್ದರಿಂದ ಆಪ್ತಕಾಮರಾದ ನಾವು ಶಾಸ್ತ್ರವಿರುದ್ಧ ನಡೆದುಕೊಂಡರೆ, ಲೋಕಸಂಗ್ರಹಕ್ಕೆ ಚ್ಯುತಿ ಬಂದಂತಾಗುತ್ತದೆ" ಎಂದು ವಾದಿಸಿದರು. ಇದಕ್ಕೆ ಒಪ್ಪಿ, ಆ ಚಿಕ್ಕ ಮಕ್ಕಳು ಆಳಂದಿಯಿಂದ ೬೦–೭೦ ಮೈಲಿಯಷ್ಟು ದೂರದಲ್ಲಿದ್ದ ದಕ್ಷಿಣಕಾಶಿ ಎಂದು ಪ್ರಸಿದ್ಧವಾದ ಪೈಠಣಕ್ಕೆ ತಲುಪಿ, ಅಲ್ಲಿಯ ಪಂಡಿತರಿಗೆ ತಮ್ಮ ಪರಿಚಯಪತ್ರವನ್ನು ಕೊಟ್ಟು ಅವರ ಮುಂದೆ ಕೈಜೋಡಿಸಿಕೊಂಡು ನಿಂತರು.

ಅಲ್ಲಿಯ ಪಂಡಿತರು ಕೂಡ ಆ ವಿಷಯವನ್ನು ಕೂಲಂಕಷವಾಗಿ ಚರ್ಚಿಸಿ, "ಸಂನ್ಯಾಸಿಯ ಮಕ್ಕಳಾದುದರಿಂದ ನೀವು ಉಭಯ ಕುಲಭ್ರಷ್ಟರು. ಆದುದರಿಂದ ಶಾಸ್ತ್ರದಲ್ಲಿ ನಿಮಗೆ ಪ್ರಾಯಶ್ಚಿತ್ತವಿಲ್ಲ. ಆದ್ದರಿಂದ ಶುದ್ಧಿಪತ್ರ ನೀಡಲು ಅವಕಾಶವಿಲ್ಲ" ಎಂದು ತೀರ್ಮಾನಿಸಿದರು. "ಇನ್ನು ನಮಗೆ ಗತಿ ಏನು?" ಎಂಬ ನಿವೃತ್ತಿನಾಥರ ಪ್ರಶ್ನೆಗೆ, ಆ ಪಂಡಿತರು ಹೀಗೆ ಉತ್ತರ ಕೊಟ್ಟರು: "ಇನ್ನು ನೀವೆಲ್ಲರೂ ತೀವ್ರ ತಪಸ್ಸನ್ನು ಕೈಕೊಂಡು, ಸರ್ವತ್ರ

ಧಾರವಾಡದ ನಿವಾಸಿಗಳಾದ ಮಾನ್ಯ ಲೇಖಕರು ಮರಾಠೀ ಮತ್ತು ಕನ್ನಡದಲ್ಲಿ ವಿದ್ವಾಂಸರು. ಮರಾಠಿಯಲ್ಲಿರುವ ಜ್ಞಾನೇಶ್ವರಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಬ್ರಹ್ಮಭಾವದಿಂದ ಹಸು, ಕತ್ತೆ, ನಾಯಿ ಮುಂತಾದವುಗಳಿಗೆ ನಮಸ್ಕರಿಸುತ್ತಾ ಭಕ್ತಿಪ್ರಸಾರವನ್ನು ಮಾಡುತ್ತ, ತೀರ್ಥಕ್ಷೇತ್ರಗಳನ್ನು ಸಂದರ್ಶಿಸಬಹುದು." ಉಪಾಯಗಾಣದೇ ಆ ಮಕ್ಕಳೆಲ್ಲರೂ ಆ ನಿರ್ಣಯವನ್ನು ಒಪ್ಪಲೇಬೇಕಾಯಿತು.

ಇಷ್ಟಕ್ಕೇ ಈ ಪ್ರಸಂಗವು ಕೊನೆಗೊಂಡಿದ್ದರೆ, ಮಹಾರಾಷ್ಟ್ರದ ಮತ್ತು ಭಾರತದ ಅಧ್ಯಾತ್ಮಶಾಸ್ತ್ರ ವಾಙ್ಮಯಕ್ಕೆ ಅಪಾರ ಹಾನಿಯಾಗುತ್ತಿತ್ತೇನೋ? ಕೆಲವು ಸಲ ಕೆಡುಕಿನಿಂದಲೂ ಒಳ್ಳೆಯದೇ ಆಗುತ್ತದೆ. ಹಾಗೆಯೇ ಈ ಪ್ರಸಂಗದಲ್ಲಿಯೂ ಆಯಿತು. ಅಲ್ಲಿ ನೆರೆದ ಕೆಲವು ಉಡಾಳರು ಈ ಸಹೋದರರ ನಿವೃತ್ತಿ, ಜ್ಞಾನದೇವ, ಸೋಪಾನ ಮತ್ತು ಮುಕ್ತಾಬಾಯಿ ಎಂಬ ಹೆಸರುಗಳನ್ನು ಕೇಳಿ ಗೇಲಿ ಮಾಡುತ್ತಾ, "ಕೇವಲ ಹೆಸರಿಟ್ಟದ್ದಕ್ಕೆ, ಅವುಗಳ ಮಹಿಮೆ ನಿಮಗೆ ಬರುತ್ತದೆಯೇ?" ಎಂದು ಪರಿಹಾಸ ಮಾಡತೊಡಗಿದರು. ಅದೇ ಸಮಯಕ್ಕೆ ಒಬ್ಬ ತುಂಟನು ತನ್ನ ಕೋಣದ ಮೇಲೆ ನೀರಿನ ಕೊಡಗಳನ್ನಿಟ್ಟುಕೊಂಡು ಅಲ್ಲಿ ಬಂದನು. ಆ ಕಿಡಿಗೇಡಿಗಳ ಮಾತನ್ನು ಕೇಳಿ, "ನನ್ನ ಕೋಣದ ಹೆಸರೂ 'ಜ್ಞಾನ' ಎಂದಿದೆ" ಎಂದು ನಕ್ಕನು. ಆಗ ಜ್ಞಾನದೇವರು, "ನೀನು ಹೇಳಿದ್ದು ನಿಜ; ನನ್ನ ಆತ್ಮವೇ ಆ ಕೋಣದಲ್ಲಿಯೂ ಇದೆ" ಎಂದು ಉತ್ತರಿಸಿದರು. ಅದನ್ನು ಪರೀಕ್ಷಿಸಲು ಆ ಕಿಡಿಗೇಡಿಯು ತನ್ನ ಕೋಣದ ಬೆನ್ನಿನ ಮೇಲೆ ಚಾವಟಿಯಿಂದ ಚೆನ್ನಾಗಿ ಬಾರಿಸಿದನು. ಅದರ ಚಿಹ್ನೆಗಳು ಜ್ಞಾನದೇವರ ಬೆನ್ನಿನ ಮೇಲೆ ಕೂಡ ಮೂಡಿದವು. ಆಗ ಅಲ್ಲಿಯ ಜನರೆಲ್ಲರೂ ಬೆಚ್ಚಿಬಿದ್ದರು. ಆ ಬ್ರಾಹ್ಮಣರೂ ಇದಕ್ಕೆ ಅಚ್ಚರಿಗೊಂಡು, "ನೀನು ಮಾಂತ್ರಿಕನಲ್ಲವೆಂದು ಸಾಬೀತು ಮಾಡಲು, ಈ ಕೋಣದ ಮುಖದಿಂದ ವೇದಮಂತ್ರಗಳನ್ನು ಹೊರಡಿಸು" ಎಂದರು. ಅದರಂತೆಯೇ ಜ್ಞಾನದೇವರು, ಆ ಕೋಣದ ಸಮೀಪಕ್ಕೆ ಹೋಗಿ, ಅದರ ಮೈದಡವಿ ನುಡಿದರು, "ಇಲ್ಲಿಯ ಬ್ರಾಹ್ಮಣವರ್ಯರು ನಿನ್ನ ಮುಖದಿಂದ ವೇದಮಂತ್ರಗಳನ್ನು ಅಪೇಕ್ಷಿಸುತ್ತಲಿದ್ದಾರೆ. ಓಂಕಾರ ಸಹಿತವಾಗಿ ಅದನ್ನು ಹೇಳಪ್ಪ!" ಆಶ್ಚರ್ಯವೇನೆಂದರೆ, ಆ ಕೋಣದ ಬಾಯಿಯಿಂದ "ಓಂ ಅಗ್ನಿಮೀಳೇ ಪುರೋಹಿತಂ...." ಮುಂತಾದ ವೇದಮಂತ್ರಗಳ ಸಸ್ವರ ಉಚ್ಚಾರವಾಯಿತು. ಅದರಿಂದ ದಿಗ್ಭ್ರಮೆಗೊಂಡ ಬ್ರಾಹ್ಮಣರೆಲ್ಲರೂ ಏಕಕಂಠದಿಂದ ಆ ಮಕ್ಕಳನ್ನು ಹೊಗಳುತ್ತ, "ನೀವು ಸಾಕ್ಷಾತ್ ತ್ರಿಮೂರ್ತಿಗಳ ಅವತಾರ; ಮುಕ್ತಾಬಾಯಿ ಜಗದಂಬೆ. ನಮ್ಮಿಂದ ಅಪರಾಧವಾಯಿತು. ನಿಮ್ಮಂಥವರಿಗೆ ಯಾರು ಯಾವ ಶುದ್ಧಿಪತ್ರವನ್ನು ಕೊಡಲು ತಾನೆ ಸಾಧ್ಯ?" ಎಂದು ಅವರನ್ನು ಕೊಂಡಾಡಿದರು. ಇದಕ್ಕೆ ಜ್ಞಾನದೇವರ ಮಾರ್ಮಿಕವಾದ ಉತ್ತರವಿದು, "ಇದೆಲ್ಲ ತಮ್ಮ ಪಾದಗಳ ಮಹಿಮೆ, ನಮ್ಮಲ್ಲಿ ಇಂತಹ ಸಾಮರ್ಥ್ಯವಿಲ್ಲ."

ನಂತರ ಆ ನಾಲ್ವರ ಜಯಜಯಕಾರವಾಯಿತು. ಜನಜಂಗುಳಿ ಅವರನ್ನು ಮುತ್ತಿತು. ನಂತರ ಅವರೆಲ್ಲರೂ ಕೆಲವು ದಿವಸಗಳು ಪೈಠಣದಲ್ಲಿಯೇ ಇದ್ದರು. ಜ್ಞಾನೇಶ್ವರರು ಅಧ್ಯಾತ್ಮವಿಷಯವಾಗಿ ಪ್ರವಚನ, ಕೀರ್ತನೆಗಳನ್ನು ಮಾಡಿದರು. ಆ ಬಳಿಕ ಈ ನಾಲ್ಕೂ ವಿಭೂತಿಗಳು ಸಂತ ನಾಮದೇವರೊಂದಿಗೆ ಮತ್ತು ಪ್ರಥಮ ಶಿಷ್ಯವಾದ ಆ ಕೋಣದೊಂದಿಗೆ ತೀರ್ಥಕ್ಷೇತ್ರಗಳನ್ನು ಸಂದರ್ಶಿಸುತ್ತ ಸಾಗಿದರು. ಸಂತ ನಾಮದೇವರ ಅಭಂಗಗಳ ಆಧಾರದಿಂದ ಈ ಪ್ರಸಂಗದ ವರ್ಣನೆಯನ್ನು ನಾವು ತಿಳಿಯಬಹುದು.

ಜ್ಞಾನದೇವರ ಮೇಲಿನ ಪವಾಡಗಳು ಕಪೋಲಕಲ್ಪಿತ ಅಥವಾ ಅಂಧಶ್ರದ್ಧೆ ಎಂದು ಆಕ್ಷೇಪಿಸುವವರು ಅನೇಕರು. ಆದರೆ ಇದು ಸ್ಥೂಲದ ದೃಷ್ಟಿ. ಉಪನಿಷತ್ತುಗಳಲ್ಲಿ, **'ಅಣೋರಣೀಯಾನ್ ಮಹತೋ ಮಹೀಯಾನ್'** – 'ಅಣುವಿಗಿಂತಲೂ ಅಣುವಾಗಿದೆ, ಮಹತ್ತಿಗಿಂತಲೂ ಮಹತ್ತಾಗಿದೆ' ಎಂದು ವರ್ಣಿತವಾದ ಆತ್ಮತತ್ತ್ವವನ್ನು ಸಾಕ್ಷಾತ್ಕರಿಸಿಕೊಂಡವರಿಗೆ ಪಂಚಭೂತಗಳ ಮೇಲೆ ಸಂಪೂರ್ಣ ಪ್ರಭಾವ ಬರುವುದರಿಂದ ಇವು ಸಹಜಸಾಧ್ಯ.

ಜ್ಞಾನದೇವರಂತಹ ಹದಿನೇಳು ವರ್ಷದ ಯುವಕನು ಭಗವದ್ಗೀತೆಯ ಮೇಲೆ ಅದ್ಭುತ ವ್ಯಾಖ್ಯಾನವನ್ನು ಮಾಡುವುದೇ ಈ ಎಲ್ಲ ಪವಾಡಗಳಿಗಿಂತ ಹೆಚ್ಚಿನದು. ೭೬೦ ವರ್ಷಗಳಾದ ಮೇಲೂ, ಆ ಮರಾಠಿ ವ್ಯಾಖ್ಯಾನವು ಮಹಾರಾಷ್ಟ್ರದ ಶಿಕ್ಷಿತ ಅಶಿಕ್ಷಿತರೆಲ್ಲರಿಗೂ ಶಿರಸಾ ವಂದ್ಯವಾಗಿರುವದೇ ದೊಡ್ಡ ಪವಾಡ. ಇದಲ್ಲದೆ ಗೀತೆಯ ಆರನೆಯ ಅಧ್ಯಾಯದಲ್ಲಿಯ **ಯೋಗೀ ಯುಂಜೀತ ಸತತಂ**... ಎಂಬ ಶ್ಲೋಕದ ಮೇಲೆ ಜ್ಞಾನದೇವರು ಬರೆದ ವ್ಯಾಖ್ಯಾನದಲ್ಲಿ ಬರುವ ಕುಂಡಲಿನೀ ಯೋಗದ ವರ್ಣನೆ, ಅದರಿಂದ ಲಭಿಸುವ ಸಿದ್ಧಿಗಳ ವಿವರಣೆಯನ್ನು ಓದಿದಾಗ ಅವರು ಯೋಗೇಶ್ವರರಾಗಿರಲೇಬೇಕು ಎಂಬುದು ಖಚಿತವಾಗುತ್ತದೆ. ಜ್ಞಾನೇಶ್ವರಿಯನ್ನು ಓದಿಯೇ ಜ್ಞಾನೇಶ್ವರರ ಘನತೆಯನ್ನು ಊಹಿಸಬಹುದು. ಅದರ ಕನ್ನಡಾನುವಾದವೂ ಲಭ್ಯವಿದೆ.

## ಓದುಗರ ವೇದಿಕೆ

### ನಿತ್ಯಜೀವನದಲ್ಲಿ ಆಧ್ಯಾತ್ಮಿಕತೆ

ನಮ್ಮ ದಿನನಿತ್ಯದ ಜೀವನದಲ್ಲಿ ನೈತಿಕತೆ, ಧರ್ಮ ಮತ್ತು ಅಧ್ಯಾತ್ಮಗಳನ್ನು ಹೇಗೆ ಅಳವಡಿಸಿಕೊಳ್ಳಬಹುದು ಎಂಬುದರ ಬಗ್ಗೆ ನಿಮ್ಮ ಅಭಿಪ್ರಾಯ, ಅನುಭವಗಳನ್ನು ನಿಮ್ಮ ಸಹ ಓದುಗರ ಜೊತೆಗೆ ಹಂಚಿಕೊಳ್ಳಿ. ಧ್ಯಾನ, ಪ್ರಾರ್ಥನೆ, ಪೂಜೆ, ಆಧ್ಯಾತ್ಮಿಕ ಗ್ರಂಥಗಳ ಪಠಣ, ನೀತಿವಂತ ಬಾಳುವೆ, ಸದಾಚಾರ – ಇವುಗಳ ಅಭ್ಯಾಸವು ನಮ್ಮ ಬಾಳಿಗೆ ಹೇಗೆ ಸುಖ, ಶಾಂತಿ, ನೆಮ್ಮದಿಗಳನ್ನು ನೀಡಬಲ್ಲುದು? ಇವುಗಳ ಅಭ್ಯಾಸದಲ್ಲಿ ನಿಮ್ಮ ಅನುಭವ ಏನು? – ಇದರ ಬಗ್ಗೆ ೩೦೦ ಪದಗಳಿಗೆ ಮೀರದಂತೆ ನಮಗೆ ಬರೆದು ಕಳಿಸಿ. ದಯವಿಟ್ಟು ಪವಾಡಗಳನ್ನು, ಅತೀಂದ್ರಿಯವೆಂಬಂತಹ ಸಂಗತಿಗಳನ್ನು ಬರೆಯಬೇಡಿ. ಬರಹಗಳು ತಲುಪಬೇಕಾದ ಕಡೆಯ ದಿನಾಂಕ: ೧–೭–೨೦೦೯. ಉತ್ತಮ ಬರಹಗಳನ್ನು 'ಓದುಗರ ವೇದಿಕೆ' ಅಂಕಣದಲ್ಲಿ ಪ್ರಕಟಿಸಲಾಗುವುದು.

**– ಸಂ.**